XX. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ 1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

1) 1988-89 ಹಾಗೂ 1992-93ನೇ ಸಾಲುಗಳ ಕಾವೇರಿ ಜಲಾನಯನ ಏತ ನೀರಾವರಿ ನಿಗಮದ 2 ಹಾಗೂ 6ನೇ ವಾರ್ಷಿಕ ವರದಿಗಳು.

2) 1990-91ನೇ ಸಾಲಿನ ಕೃಷ್ಣ ಜಲಾನಯನ ಏತ ನೀರಾವರಿ ನಿಗಮ ನಿಯಮಿತದ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

XXI. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) (ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಮಂತ್ರಿ) ಅವರ) ಪರವಾಗಿ ಮಾನ್ಯ ಅಧ್ಯಕ್ಷರೇ 1973ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮದ 24ನೇ ಕಲಮಿನ ಮೇರೆಗೆ.

1) 1994-95ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ.

1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

2) ಕರ್ನಾಟಕ ಮಾಂಸ ಮತ್ತ ಕೋಳಿ ಮಾರಾಟ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ ಮತ್ತು 31.3.1995ರ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

XXII. ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ 1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 69ನೇ ಕಲಮಿನ ಮೇರೆಗೆ. ಕರ್ನಾಟಕ ಗೃಹ ಮಂಡಳಿಯ 1984-85 ರಿಂದ 1994-95ನೇ ಸಾಲುಗಳವರೆಗಿನ ವಾರ್ಷಿಕ ವರದಿಗಳನ್ನು ಮಂಡಿಸುವುದು.

XXIII. ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮಿನುಗಾರಿಕೆ ರಾಜ್ಯ ಮಂತ್ರಿ) ಅವರು : 1956ರ ಕಂಪನಿ ಕಾಯ್ದೆಯ 619ಎ ಕಲಮಿನ ಮೇರೆಗೆ.

31.3.1993 ರಂದು ಅಂತ್ಯಗೊಳ್ಳುವ ಕರ್ನಾಟಕ ಮಿನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 23ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು (ವಿಳಂಬಕ್ಕೆ ಕಾರಣ ಟಿಪ್ಪಣಿಯೊಡನೆ) ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಸುರೇಶ್ ಕುಮಾರ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ನನ್ನ ಅನುಮತಿ ಕೋರಿದ್ದಾರೆ. ಅದು ಮಾನ್ಯ ಮೆಡಿಕಲ್ ಎಜುಕೇಶನ್ ಮಿನಿಸ್ಟರ್‌ಗೆ ಸಂಬಂಧಪಡುತ್ತದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(2). ಡಾ|| ಶಾಮಲಾ ದೇವಿ ಡೆಂಟಲ್ ಕಾಲೇಜುನಲ್ಲಿ ನಡೆಯುತ್ತಿರುವ ಅವ್ಯವಹಾರ.

ಶ್ರೀ ಎಸ್. ಸುರೇಶ್ ಕುಮಾರ್ : ನವೆಂಬರ್ 3ನೇ ತಾರೀಖು ತಮ್ಮ ಹತ್ತಿರ ಆ ಕಾಲೇಜಿನಲ್ಲಿ ಅನ್ಯಾಯಕ್ಕೆ ಒಳಗಾದ ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಕರೆದುಕೊಂಡು ಬಂದೆ. ಮೂರನೆಯ ದಿವಸ ಈ ಸಂಬಂಧದಲ್ಲಿ ಮಾನ್ಯ ಸಚಿವರನ್ನು ಸಂಪರ್ಕಿಸಿದೆ. 14ನೆಯ ತಾರೀಖು ನವೆಂಬರ್.

ಅಧ್ಯಕ್ಷರು : ಈಗ ಏನಾಗಿದೆ?

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಇದರ ಬಗ್ಗೆ ಅನಿರ್ದಿಷ್ಟ ಕಾಲ ಉಪವಾಸ ಮುಷ್ಕರ ಮಾಡದೆ. ತಾವು ಬಂದಿರಿ ನನಗೆ ಸಮಾಧಾನ ಮಾಡಿದಿರಿ.

ಅಧ್ಯಕ್ಷರು : ಅದೆಲ್ಲಾ ನನಗೆ ಗೊತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳಿದಿರಿ. ಇದು ನನ್ನ ಇಶ್ಯೂ. ಇದಕ್ಕೇ ನಾನು ಪರಿಹಾರ ಮಾಡಿಕೊಡುತ್ತೇನೆಂದು ಹೇಳಿದಿರಿ. ಅದರ ನಂತರ ತಮ್ಮ ಕಛೇರಿಯಲ್ಲಿ ಸಚಿವರನ್ನು ಕೂಡ ಕರೆದು ಇದರ ಬಗ್ಗೆ ಸೂಕ್ತವಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಅವರಿಗೆ ಏನು ಅನ್ಯಾಯ ಮಾಡಿದ್ದಾರೆ, ಅದನ್ನು ಪರಿಹರಿಸಬೇಕು ಎಂದು ಆದೇಶವನ್ನು ಕೊಟ್ಟು ಮ್ಯಾನೇಜ್‌ಮೆಂಟಿಗೆ ಕೂಡ ಎರಡು ವಿಚಾರಗಳನ್ನು ಹೇಳಿದಿರಿ.

ಇದುವರೆವಿಗೂ ಕೂಡ ಏನೂ ಆಗಿದೆ, ವಿದ್ಯಾರ್ಥಿಗಳಿಗೆ ಅಡ್ಮಿಶನ್ ಟಿಕೇಟ್ ಕೊಡದಿದ್ದರಿಂದ ಅವರು ಹೈಕೋರ್ಟಿಗೆ ಹೋಗಿ ಮಧ್ಯಂತರ ಆದೇಶ ತೆಗೆದುಕೊಂಡು ಬಂದು ಇವ್ಮೊತ್ತು ಪರೀಕ್ಷೆಗೆ ಕುಳಿತುಕೊಳ್ಳುವಂಥ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳ ಒಳಿತಗೋಸ್ಕರ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಉತ್ತರ ನೀಡಬೇಕು.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಈ ವಿಷಯವಾಗಿ ಸಾಕಷ್ಟು ಗೊತ್ತಿದೆ. ತಮ್ಮ ಅಧ್ಯಕ್ಷತೆಯಲ್ಲೇ ಇವ್ಮೊತ್ತು ಕುರಿತು ಸಭೆ ನಡೆಸಿ, ಸಭೆಯಲ್ಲಿ ಸಂಬಂಧಪಟ್ಟ ಕಾರ್ಯದರ್ಶಿ, ನಿರ್ದೇಶಕರು ಮತ್ತು ನಾವು-ನೀವು ಕುಳಿತು ವಿಚಾರಣೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಂಡು ಕಂಡುಕೊಂಡ ಪರಿಹಾರವನ್ನು ತಿಳಿಸುತ್ತೇನೆ. ಮಾನ್ಯ ಸದಸ್ಯರಿಗೆ ಹೇಳುವುದಾದರೆ, ವೈದ್ಯಕೀಯ ಶಿಕ್ಷಣ ಮಂಡಳಿಯಲ್ಲಿ ನಾನೂ ಕೂಡ ಒಬ್ಬ ನಿರ್ದೇಶಕನಾಗಿದ್ದು, ವೈದ್ಯಕೀಯ ಶಿಕ್ಷಣ ನಿರ್ದೇಶಕರ ಬಗ್ಗೆ ವಿಚಾರಣೆಗೆ ಕಳುಹಿಸಿಕೊಡಬೇಕೆಂದು ಕಾರ್ಯದರ್ಶಿಯವರು ಕೇಳಿದಾಗ ನಾನೂ ಕೂಡ ಇದರಲ್ಲಿ ಬದಲಾವಣೆ ಮಾಡಿ ಜಂಟಿ ನಿರ್ದೇಶಕರು, ದಂತ ವೈದ್ಯಕೀಯ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರು ಹಾಗೂ ಮತ್ತೊಬ್ಬರನ್ನೊಳಗೊಂಡಂತೆ ರಚಿಸಿರುವ ಸಮಿತಿಯನ್ನು ಈಗಾಗಲೇ ಇನ್ಸ್‌ಪೆಕ್ಷನ್ ರಿಪೋರ್ಟ್ ಬಂದಿದೆಯೋ ಅಥವಾ ಇಲ್ಲವ್ಹೋ ನನಗೆ ಗೊತ್ತಿಲ್ಲ. ಆದರೂ ಈ ಕುರಿತು ತಿಳಿದುಕೊಂಡು ತಕ್ಷಣ ಆಜ್ಞೆ ಕಳುಹಿಸುತ್ತೇನೆ.

ಅಧ್ಯಕ್ಷರು : ಇಲ್ಲಿ ಏನಾಗಿದೆಯೆಂದರೆ, ನಿಮ್ಮ ಸಮಿತಿಯನ್ನು ಹೋಗಿದ್ದರಲ್ಲ, ಅವರೂ ಕೂಡ ಇವರ ಜೊತೆ ಶಾಮೀಲಾಗಿದ್ದಾರೆ. ಆ ಕಾಲೇಜಿನ ವಿದ್ಯಾರ್ಥಿಗಳು ಮಾರನೆಯ ದಿವಸ ಬಂದು ಹೇಳಿದಂತೆ ಅವರಿಗೆ ತಿಳಿಸಲಾರದಂತೆ ಸಮಯ ನಿಗದಿಪಡಿಸಲಾಗಿದೆಯೊಂದರು ಅವರು ಎಂತಹುದೋ ಅಸೋಸಿಯೇಷನ್ ಮಾಡಿಕೊಂಡಿದ್ದು, ಆ ಅಸೋಸಿಯೇಷನ್ ಒಂದಾಗಬೇಕು,. ಮುಂತಾದ ವಿಚಾರಗಳಿವೆ. ಆ ವಿದ್ಯಾರ್ಥಿಗಳ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ನಮಗೂ ಮಕ್ಕಳಿರುವುದರಿಂದ ತಾವು ದಯಮಾಡಿ ಇದರ ಬಗ್ಗೆ ಚರ್ಚಿಸದೆ ಅನಂತರ ಹತ್ತು ನಿಮಿಷ ಕೊಠಡಿಗೆ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರನ್ನು ಕರೆದು ಸಭೆಯಲ್ಲಿ ಕುಳಿತು ಮಾತನಾಡಿ. ನಾನು ಸುರೇಶ್‌ಕುಮಾರ್‌ರವರನ್ನು ಕರೆಯುತ್ತೇನೆ. ವಿದ್ಯಾರ್ಥಿಗಳ ಭವಿಷ್ಯದ ಕುರಿತು ಯಾವುದಾದರೊಂದು ರೀತಿಯಲ್ಲಿ ನಿರ್ಧಾರ ತೆಗೆದುಕೊಂಡು ಇತ್ಯರ್ಥಗೊಳಿಸೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದೇ ವಿಷಯ ಕಳೆದ ಸದನದಲ್ಲಿ ಚರ್ಚೆಯಾಗಿ ಮಾನ್ಯ ಸದಸ್ಯರಾದ ಎಸ್. ಸುರೇಶ್‌ಕುಮಾರ್‌ರವರು ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಆಗ ಸಚಿವರು ಸ್ಪಷ್ಟವಾದ ಆಶ್ವಾಸನೆ ಕೊಟ್ಟಿದ್ದರು. ಆದರೆ ಇವ್ಮೊತ್ತು ಕೂಡ ಅಲ್ಲಿ.....

ಅಧ್ಯಕ್ಷರು : ಇದನ್ನು ಸುರೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದ್ದರಲ್ಲ. ಅವಧು ಅವೊತ್ತು ಸತ್ಯಾಗ್ರಹ ಮಾಡುತ್ತಿದ್ದುದ್ದನ್ನು ಕಂಡು ಸತ್ಯಾಗ್ರಹ ಕೈಬಿಡುವಂತೆ ಹೇಳಿ ಎಬ್ಬಿಸದೆ ಹೋಗಿದ್ದರೆ ಅವರು ಇವೊತ್ತು ನಮ್ಮ ಮಧ್ಯೆ ಇರುತ್ತಿರಲಿಲ್ಲ ! ಮತ್ತು ಅಸ್ವಸ್ಥರಾಗಿದ್ದ ಅವರನ್ನು ಜಯದೇವ ಹೃದ್ರೋಗ ಸಂಸ್ಥೆಗೆ ಸೇರಿಸಿ ಚಿಕಿತ್ಸೆ ಕೊಡಿಸದೆ ಹೋಗಿದ್ದರೆ ಅವರು ಸರಿಹೋಗುಲ ಮೂರುವಾರಗಳು ಬೇಕಾಗುತ್ತಿತ್ತು. ಇದರ ಬಗ್ಗೆ ಅನಂತರ ಚರ್ಚಿಸೋಣ. Honble minister has agreed. ಸಭೆಗೆ ಬರುವಾಗ ಸುರೇಶ್‌ಕುಮಾರ್‌ರವರೇ ತಾವೂ ಬನ್ನಿ, ಹಾಗೆಯೇ ತಮ್ಮ ಪಕ್ಷದ ನಾಯಕರುಗಳಿದ್ದರೆ ಅವರನ್ನೂ ಕರೆ ತನ್ನಿ. We will find the Solution for it.

ಡಾ|| ಯು. ಚಿತ್ತರಂಜನ್ : ಇದೇ ರೀತಿ ಮೆಡಿಕಲ್, ಹೋಮಿಯೋಪಥಿ ಕಾಲೇಜುಗಳ ಬಗ್ಗೆ ಆಶ್ವಾಸನೆ ಕೊಟ್ಟಿದ್ದರು, ಆದರೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ.

(3) ಅರಕಲ ಗೂಡಿನಲ್ಲಿ ನಡೆದ ವಿವಿಧ ಸಭೆ ಸಮಾರಂಭಗಳಿಗೆ ಸ್ಥಳೀಯ ಶಾಸಕರನ್ನು ಆಹ್ವಾನಿಸದೇ ಇರುವುದು.

+ ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, 13ನೇ ತಾರೀಖು ಅರಕಲಗೂಡಿನ ಸುಮಾರು ನಾಲ್ಕು ಸ್ಥಳಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳ ಶಂಕುಸ್ಥಾಪನೆ ಮತ್ತು ಕೆಲವು ಯೋಜನೆಗಳು ಉದ್ಘಾಟನೆಯನ್ನು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು ನೆರವೇರಿಸಿದ್ದಾರೆ. ನಿನ್ನೆ ಕೂಡ ಅರಕಲಗೂಡಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಜನ ಸಂಪರ್ಕ ಸಭೆ ಕೂಡ ನಡೆಸಿದ್ದಾರೆ. ಈ ಎಲ್ಲಾ ಸಭೆ-ಸಮಾರಂಭಗಳಿಲ್ಲಿ ಆ ಕ್ಷೇತ್ರದ ಶಾಸಕನಾಗಿರುವ ನನ್ನನ್ನು ಆಹ್ವಾನಿಸಲಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆಯ ಸದಸ್ಯರದು ಅತಿ ಮಹತ್ವದ ಸ್ಥಾನವೆಂದು ಎಲ್ಲರಿಗೂ ಕೂಡ ಗೊತ್ತು. ಶಾಸಕರುಗಳನ್ನು ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ ಸರ್ಕಾರದ ಸೂಚನೆ ಹಾಗೂ ಶಿಷ್ಟಾಚಾರ ಏನಿದೆ? ಶಾಸಕ ರಾಮಸ್ವಾಮಿಯಾದ ನನ್ನನ್ನು ಸಭೆ-ಸಮಾರಂಭಗಳಿಗೆ ಕರೆಯದೆ ನನ್ನ ಗೌರವ ಕಡಿಮೆಯಾಯಿತೆಂದು ನಾನು ತಿಳಿದುಕೊಂಡಿಲ್ಲ. ಆದರೆ, ಇದು ಈ ಸದನದ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದ್ದು, ಶಾಸಕರಾದ ನಮ್ಮನ್ನು ಅಭಿವೃದ್ಧಿ ಕಾರ್ಯಗಳಿಗೆ ತೊಡಗಿಸಿಕೊಳ್ಳಬೇಕೋ ಅಥವಾ ಬೇಡವೋ?

ಶ್ರೀ ಎಸ್. ನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇವು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾರ್ಯಕ್ರಮಗಳಾಗಿದ್ದು, ಆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ನನ್ನನ್ನು ಆಹ್ವಾನಿಸಿದ್ದರು. ಮತ್ತು ನಿನ್ನೆಯೂ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಕಾರ್ಯಕ್ರಮಗಳಿಗೆ ಸನ್ಮಾನ್ಯ ಸದಸ್ಯರನ್ನು ಕೂಡ ಆಹ್ವಾನಿಸಿದ್ದರು. ಅವರ ಹೆಸರು ಆಹ್ವಾನ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ಈ ಬಗ್ಗೆ ತಾರತಮ್ಯ ತೋರಿಸಿ, ಅವರನ್ನು ಸಭೆ-ಸಮಾರಂಭಗಳಿಗೆ ಕರೆಯಬಾರದೆಂಬ ಯಾವುದೇ ನಿರ್ದಿಷ್ಟ ಉದ್ದೇಶವಿಲ್ಲ. ಅದು ಜಿಲ್ಲಾ ಪಂಚಾಯತ್ ಕಾರ್ಯಕ್ರಮವಾದುದರಿಂದ ನಾನು ಅದರಲ್ಲಿ ಭಾಗವಹಿಸಿದ್ದೇನೆ ವಿನಹ ಇದು ಸರ್ಕಾರಿ ಕಾರ್ಯಕ್ರಮದ ಅಂಗವಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವುದೇ ಸಭೆ-ಸಮಾರಂಭಗಳು ನಡೆದರೂ ಆಯಾ ಕ್ಷೇತ್ರದ ಶಾಸಕರು ಅಧ್ಯಕ್ಷತೆ ವಹಿಸಬೇಕೆಂಬುದು ಶಿಷ್ಟಾಚಾರ. ಆದರೆ, ಸಭೆ-ಸಮಾರಂಭಗಳಿಗೆ ಶಾಸಕರನ್ನು ಆಹ್ವಾನಿಸದಿರುವುದು ಅಕ್ರಮ ಅಪರಾಧ. ಏನಿದು ಹುಡುಗಾಟ! ಇದು ಶಾಸಕರುಗಳಿಗೆ ತೋರಿಸತಕ್ಕಂಥ ಅಗೌರವವಾಗಿದೆ. ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು.

(ಮುಂದಲ)